# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ-1

| | |
|---|---|
| – ಬೆಂಗಳೂರು, ಬುಧವಾರ, ಜೂನ್ ೨೧, ೧೯೯೫<br>(ಜ್ಯೇಷ್ಠ ೩೧, ಶಕ ವರ್ಷ ೧೯೧೭) | ಸಂಖ್ಯೆ<br>೮೪೫ |


## ಕರ್ನಾಟಕ ಸರ್ಕಾರದ ನಡವಳಿಗಳು

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

**ವಿಷಯ:** ಭಾರತ ಸಂವಿಧಾನದ ಅನುಚ್ಛೇದ 16(4)ರ ಅನ್ವಯ ರಾಜ್ಯ ಸಿವಿಲ್ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಮೀಸಲಾತಿ

ಓದಲಾಗಿದೆ :
(1) ಸರ್ಕಾರಿ ಆದೇಶ ಸಂಖ್ಯೆ : ಸಿ.ಆಸುಇ: 56 ಸಹಿಮ 94, ದಿನಾಂಕ: 5-11-1994
(2) ಸರ್ಕಾರಿ ಆದೇಶ ಸಂಖ್ಯೆ : ಸಿ.ಆಸುಇ: 19 ಸಹಿಮ 89, ದಿನಾಂಕ: 12-7-1989
(3) ಸರ್ಕಾರಿ ಆದೇಶ ಸಂಖ್ಯೆ : ಸಿ.ಆಸುಇ: 16 ಸಹಿಮ 89, ದಿನಾಂಕ: 22-7-1989
(4) ಸರ್ಕಾರಿ ಆದೇಶ ಸಂಖ್ಯೆ : ಸಿ.ಕಇ: 251 ಬಿಸಿಎ 94, ದಿನಾಂಕ: 31-1-1995

ಪ್ರಸ್ತಾವನೆ :

ಮೇಲೆ ಕಾಣಿಸಿದ ದಿನಾಂಕ: 31ನೇ ಜನವರಿ 1995ರ ಸರ್ಕಾರಿ ಆದೇಶದಲ್ಲಿ ಹಿಂದುಳಿದ ವರ್ಗದವರ ಮೀಸಲಾತಿ ಪ್ರಮಾಣವನ್ನು ಶೇಕಡಾ 50ಕ್ಕೆ ನಿಗದಿಪಡಿಸಿದ ಹಿನ್ನೆಲೆಯಲ್ಲಿ ರಾಜ್ಯ ಸಿವಿಲ್ ಸೇವೆಗಳ ಸರ್ಕಾರದ ಆಧೀನದಲ್ಲಿ ಬರುವ ಸೇವೆಗಳ ಅಥವಾ ಹುದ್ದೆಗಳ ನೇಮಕಾತಿಯಲ್ಲಿ ಭಾರತ ಸಂವಿಧಾನದ 16(4)ನೇ ಅನುಚ್ಛೇದದ ಪ್ರಕಾರ ಅಳವಡಿಸಬೇಕಾದ ರೋಸ್ಟರ್ ಬಗ್ಗೆ ಪರಿಶೀಲಿಸಲಾಗಿದೆ.

ಅದರ ಪರಿಣಾಮವಾಗಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95 ಬೆಂಗಳೂರು, ದಿನಾಂಕ 20ನೇ ಜೂನ್ 1995

ಮೇಲಿನ (1)ರಲ್ಲಿ ಓದಲಾದ ದಿನಾಂಕ 5ನೇ ನವೆಂಬರ್ 1994ರ ಆದೇಶವನ್ನು ರದ್ದುಪಡಿಸುತ್ತಾ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಗಳಲ್ಲಿ ಒದಗಿಸಲಾಗಿರುವ ಪರಿಷ್ಕೃತ ಮೀಸಲಾತಿಯನ್ನು ಜಾರಿಗೆ ತರಲು ಈ ಕೆಳಕಂಡಂತೆ ಆದೇಶಿಸಲಾಗಿದೆ.


PRINCIPAL
RURAL COLLEGE
KANAKAPURA-562 117
Ramanagara District.

1. ಪ್ರವರ್ಗ -1, ಪ್ರವರ್ಗ-2(ಎ), ಪ್ರವರ್ಗ -2(ಬಿ), ಪ್ರವರ್ಗ -3(ಎ), ಪ್ರವರ್ಗ -3(ಬಿ) ಮುಂತಾದ

ಪದ ಸಮೂಹಗಳು ಸರ್ಕಾರಿ ಆದೇಶ ಸಂಖ್ಯೆ :ಸಕಿ 150 ಬಿಸಿಎ 94, ದಿನಾಂಕ 17ನೇ ಸೆಪ್ಟಂಬರ್ 1994ರಲ್ಲಿ ವರ್ಗೀಕರಣದ ಅರ್ಥವನ್ನೆ ಹೊಂದಿರುತ್ತದೆ. ಈ ಇತರೆ ಹಿಂದುಳಿದವರನ್ನು ವರ್ಗೀಕರಣದ ಉದ್ದೇಶಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಆಗಿಂದಾಗ್ಗೆ ಹೊರಡಿಸಿರುವ ಆದೇಶಗಳಲ್ಲಿ ನೀಡುವ ವರ್ಗೀಕರಣವನ್ನೇ ಅನುಸರಿಸತಕ್ಕದ್ದು, ನೇರ ನೇಮಕಗಳಲ್ಲಿ ಮೀಸಲಾತಿಯನ್ನು ಮೇಲಿನ (4)ರಲ್ಲಿ : ಓದಲಾಗಿರುವ ಆದೇಶದಲ್ಲಿ ನಿಗಧಿಪಡಿಸಿದ ಶೇಕಡಾವಾರಿನಲ್ಲಿ ಪ್ರತಿಯಂದು ನೇಮಕಾತಿ ಪ್ರಾಧಿಕಾರದಡಿಯಲ್ಲಿನ ಪ್ರತಿಯೊಂದು ವೃಂದಕ್ಕೂ ಅನ್ವಯಿಸತಕ್ಕದ್ದು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತ ಇತರೆ ಹಿಂದುಳಿದ ವರ್ಗಗಳ ಸಮೂಹದವರಿಗೆ ಮೀಸಲಿರಿಸಬೇಕಾದ ರಿಕ್ತ ಸ್ಥಾನಗಳ ಮೊತ್ತವನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಭಂದದಲ್ಲಿರುವಂತೆ 100 ರಿಕ್ತ ಸ್ಥಾನಗಳ ರೋಸ್ಟರ್ ಆಧಾರದ ಮೇಲೆ ಲೆಕ್ಕ ಮಾಡತಕ್ಕದ್ದು. ಪ್ರತಿಯೊಂದು ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ವೃಂದಕ್ಕೆ ಸಂಬಂಧಿಸದಂತೆ ಪ್ರತ್ಯೇಕವಾಗಿ ಈ ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭವಾಗುವಂತೆ ರೋಸ್ಟರನ್ನು ಅಳವಡಿಸಿಕೊಳ್ಳಬೇಕು. ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಬಿಸಿ 100ನೇ ಬಿಂದುವಿನವರೆಗೂ ಸಂಬಂಧಿಸಿ ಆಯಾ ಗುಂಪಿನ ಅಭ್ಯರ್ಥಿಗಳಿಂದ ಆಯ್ಕೆ ಮಾಡಿ ಭರ್ತಿ ಮಾಡತಕ್ಕದ್ದು. ಉದಾಹರಣೆಗೆ ಈ ಆದೇಶದ ನಂತರದ ಮೊದಲನೇ ನೇಮಕಾತಿಯಲ್ಲಿ 21ನೇ ರಿಕ್ತ ಸ್ಥಾನಚವರೆಗೆ ಭರ್ತಿಮಾಡಲ್ಪಟ್ಟಲ್ಲಿ ಮುಂದಿನ ನೇಮಕಾತಿಯಲ್ಲಿ ರೋಸ್ಟರನ್ನು 22ನೇ ಬಿಂದುವಿನಿಂದ ಚಾಲನೆಗೊಳಿಸತಕ್ಕದ್ದು. ನಂತರದ ನೇಮಕಾತಿಗಳಲ್ಲಿಯೂ ಇದೇ ಪದ್ದತಿಯನ್ನು 100ನೇ ರಿಕ್ತ ಸ್ಥಾನ ಭರ್ತಿ ಆಗುವವರೆಗೂ ಅನುಸರಿಸತಕ್ಕದ್ದು. 100 ರಿಕ್ತ ಸ್ಥಾನಗಳನ್ನು ಭರ್ತಿಮಾಡಿದ ನಂತರ ರೋಸ್ಟರಿನ ಮೊದಲನೇ ಬಿಂದುವಿನಿಂದ ಪುನರಾಂಬಿಸತಕ್ಕದ್ದು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಬ್ಯಾಕ್ ಲಾಗನ್ನು ಹೊರತುಪಡಿಸಿ ದಿನಾಂಕ 5-11-94 ಅಥವಾ ಅದಕ್ಕೆ ಹಿಂದೆ ಜಾರಿಯಲ್ಲಿದ್ದ ಸರ್ಕಾರಿ ಆದೇಶಗಳನ್ನುಸಾರ ವರ್ಗಿಕರಿಸಲ್ಪಟ್ಟು ಭರ್ತಿಯಾಗದೇ ಆ ಆದೇಶ ಜಾರಿಗೆ ಬಂದ ದಿನಾಂಕದಂದು ಉಳಿದುಕೊಂಡಿರುವ ಎಲ್ಲಾ ರಿಕ್ತ ಸ್ಥಾನಗಳೂ ವರ್ಗಿಕರಣವನ್ನು ಕಳೆದುಕೊಳ್ಳುತ್ತದೆ ಮತ್ತು ಅವುಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸತಕ್ಕದ್ದು. ಈ ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಲಾದ ರೋಸ್ಟರ್ ಅಂತಹಾ ರಿಕ್ತ ಸ್ಥಾನಗಳಿಗೆ ಮತ್ತು ಇನ್ನು ಮುಂದೆ ಉದ್ಭವಿಸುವ ರಿಕ್ತ ಸ್ಥಾನಗಳಿಗೆ ಅನ್ವಯಿಸತಕ್ಕದು.

2. ಪ್ರತಿಯೊಂದು ಸಮೂಹದಲ್ಲಿ ಅಂದರೆ ಸಾಮಾನ್ಯ ವರ್ಗ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ/ ಇತರೆ

ಹಿಂದುಳಿದ ವರ್ಗಗಳ ಪ್ರತಿ ಸಮೂಹದಲ್ಲಿ ಪ್ರತಿ ಹತ್ತನೇ ರಿಕ್ತ ಸ್ಥಾನವನ್ನು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ್ 9ರ ಉದ್ದೇಶಕ್ಕಾಗಿ ಮಾಜಿ ಸೈನಿಕರಿಗೆ ಮೀಸಲಿಡತಕ್ಕದ್ದು.

3. ಆಯ್ಕೆ ಪ್ರಾಧಿಕಾರಿಯು ನೇಮಕಾತಿ ನಿಯಮಾನುಸಾರ ಒಂದೇ ವರ್ಗದ ಹುದ್ದೆಗಳ ಮುಖ್ಯ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಯನ್ನು ಸಿದ್ದಪಡಿಸಬೇಕಾದ ಸಂದರ್ಭಗಳಲ್ಲಿ ರೋಸ್ಟರನ್ನು ಪ್ರತ್ಯೆಕವಾಗಿ ಅಳವಡಿಸುತ್ತಾ ಎರಡು ಪಟ್ಟಿಗಳನ್ನು ಪ್ರತ್ಯೆಕವಾಗಿ ಸಿದ್ದಪಡಿಸತಕ್ಕದ್ದು. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಗಳ ಪ್ರತಿ ಗುಂಪಿಗೆ ಮೀಸಲಿರಿಸಬೇಕಾದ ರಿಕ್ತ ಸ್ಥಾನಗಳ ಸಂಖ್ಯೆಯನ್ನು ರೋಸ್ಟರ್ ಅನುಸಾರ ಲೆಕ್ಕ ಹಾಕತಕ್ಕದ್ದು ಮತ್ತು ಮುಖ್ಯ ಪಟ್ಟಿ ಮತ್ತು ಹೆಚ್ಚವರಿ ಪಟ್ಟಿಯಲ್ಲಿ ಆಯ್ಕೆ ಮಾಡಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ನೇಮಕಾತಿ ಪ್ರಾಧಿಕಾರಿ ಆಯ್ಕೆ ಪ್ರಾಧಿಕಾರಕ್ಕೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

PRINCIPAL
RURAL COLLEGE
KANAKAPURA-562 117
Ramanagara District.

4. ಪ್ರಕಟಿತ ರಿಕ್ತ ಸ್ಥಾನಗಳ ಸಂಖ್ಯೆಗಿಂತ ಲಭ್ಯವಾಗುವ ಅಬ್ಯರ್ಥಿಗಳು ಕಡಿಮೆ ಇದ್ದಲ್ಲಿ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಇತರೆ ಹಿಂದುಳಿದ ವರ್ಗಗಳಿಗೆ ಮೀಸಾಲಾತಿಯು ವಾಸ್ತವಾಗಿ ಆಯ್ಕೆ ಮಾಡಿಕೊಳ್ಳಲಾದ ಅಭ್ಯಥಿಗಳ ಸಂಖ್ಯೆಗನುಗುಣವಾಗಿರತಕ್ಕದ್ದು.

5. ಈ ಆದೇಶದಲ್ಲಿ ಒದಗಿಸಲಾದ ಮೀಸಲಾತಿಯನ್ನು ಸರಿಯಾಗಿ ಜಾರಿಗೊಳಿಸಲು ಅನುಸರಿಸಬೇಕಾದ ಆಯ್ಕೆ ವಿಧಾನವನ್ನು ಈ ಆದೇಶದ ಅನುಬಂಧ-2 ರಲ್ಲಿ ವಿವರಿಸಲಾಗಿದೆ. ಇದನ್ನು ಜಾರಿಗೊಳಿಸಲು ಲೋಕ ಸೇವಾ ಆಯೋಗ ಮತ್ತು ಇತರೆ ಆಯ್ಕೆ ಪ್ರಾಧಿಕಾರಿಗಳು ಅನುಸರಿತಕ್ಕದ್ದು.

6. ಒಂದು ವೇಳೆ ಯಾವುದೇ ವರ್ಗದ ಹುದ್ದೆಗೆ ಮಾಡಲಾದ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅವರಿಗಾಗಿ ಮೀಸಲಾದ ರಿತಕ್ ಸ್ಥಾನಗಳನ್ನು ಮುಸಲಾತಿಯಿಂದ ವಿಮುಕ್ತಿಗೊಳಿಸುವಂತಿಲ್ಲ ಮತ್ತು ಈ ರಿಕ್ತ ಸ್ಥಾನಗಳನ್ನು ತುಂಬುದಲ್ಲಿ ಮೇಲೆ (2) ಮತ್ತು (3) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶಗಳ ಸಂಖ್ಯೆ : ಸಿ.ಆಸುಇ: 19 ಸಹಿಮ 89, ದಿನಾಂಕ: 12-7-1989 ಮತ್ತು 22-7-1989 ರಲ್ಲಿ ಹೇಳಲಾಗಿರುವ ಪದ್ದತಿಯನ್ನು ಯಥವತ್ತಾಗಿ ಅನುಸರಿಸತಕ್ಕದ್ದು.

7. ಈ ಆದೇಶದಲ್ಲಿ ಪ್ರವರ್ಗ -1, ಪ್ರವರ್ಗ-2(ಎ), ಪ್ರವರ್ಗ -2(ಬಿ), ಪ್ರವರ್ಗ -3(ಎ), ಮತ್ತು ಪ್ರವರ್ಗ -3(ಬಿ) ಇವರುಗಳಿಗಾಗಿ ಗುರುತಿಸಲ್ಪಟ್ಟ ಆದೆ ಆಯಾ ವರ್ಗದ ಅರ್ಹ ಅಭ್ಯರ್ಥಿಗಳ ಲಭ್ಯತೆಯಲ್ಲಿನ ಕೊರತೆಯಿಂದಾಗಿ ಭರ್ತಿಮಾಡಲಾಗದ ರಿಕ್ತ ಸ್ಥಾನಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿಮಾಡತಕ್ಕದ್ದು ಮತ್ತು ಈ ರೀತಿ ನಷ್ಟಗೊಂಡ ರಿಕ್ತ ಸ್ಥಾನಗಳನ್ನು ಮುಂದಿನ ಮತ್ತು ತದನಂತರದ ನೇಮಕಾತಿಗಳಲ್ಲಿ ಈ ಕೆಳಗೆ ಕಾಣಿಸಿದಂತೆ ಮುಂದಕ್ಕೆ ಕೊಂಡೊಯ್ಯತಕ್ಕದ್ದು.

8. ಅದೇ ಕ್ಯಾಲೆಂಡರ್ ವರ್ಷದಲ್ಲಿ ಅಥವಾ ನಂತರದ ಎರಡು ಕ್ಯಾಲೆಂಡರ್ ವರ್ಷಗಳಲ್ಲಿ ಅದೇ ವರ್ಗದ ಹುದ್ದೆಗಳಿಗೆ ಆಗುವ ನೇಮಕಾತಿಗಳಲ್ಲಿ ಈ ಆದೇಶದಲ್ಲಿ ನಿಗಧಿಪಡಿಸಿದ ರೋಸ್ಟರ್ ಅನ್ವಯ ಮತ್ತು ನಿರ್ದಿಷ್ಟಪಡಿಸಲಾದ ವಿಧಾನದಲ್ಲಿ ಹಿಂದುಳಿದ ವರ್ಗಗಳವರಿಗೆ ರಿಕ್ತ ಸ್ಥಾನಗಳಲ್ಲಿ ಮೀಸಲಾತಿಯನ್ನು ನಿಗಧಿಪಡಿಸತಕ್ಕದ್ದು. ಆದರೆ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಲಭ್ಯತೆಯಲ್ಲಿನ ಕೊರತೆಯಿಂದಾಗಿ ನೇಮಕಾತಿಯಲ್ಲಿ ಭರ್ತಿಯಾಗದೇ ಉಳಿದ ಮೇಲಿನ ಕಂಡಿಕೆ 7ರನುಸಾರ ಮುಂದಕ್ಕೆ ಕೊಂಡೋಯ್ಯಲಾದ ರಿಕ್ತ ಸ್ಥಾನಗಳನ್ನು ಅನುಕ್ರಮವಾಗಿ ಸಂಬಂಧಿಸಿದ ಇತರೆ ಹಿಂದುಳಿದ ವರ್ಗಗಳ ಸಮೂಹಗಳಿಗೆ ಮುಂದಿನ ಆಯ್ಕೆಯಲ್ಲಿ .ಗಳಲ್ಲಿ ಸರಿದೊಗಿಸತಕ್ಕದ್ದು. ಈ ಉದ್ದೇಶಕ್ಕಾಗಿ ವಿವಿಧ ಇತರೆ ಹಿಂದುಳಿದ ವರ್ಗಗಳ ಸಮೂಹದವರಿಗೆ ಕಂಡಿಕೆ 7ರನುಸಾರ ನಷ್ಟವಾದ ರಿಕ್ತ ಸ್ಥಾನಗಳನ್ನು ಮುಂದಿನ ತಕ್ಷಣದ ಅಥವಾ ನಂತರದ ನೇರ ನೇಮಕಾತಿಗಳಲ್ಲಿ ಸಾಮಾನ್ಯ ವರ್ಗದ ಗುಂಪಿನಲ್ಲಿ ಲಭ್ಯವಾಗುವ ರಿಕ್ತ ಸ್ಥಾನಗಳನ್ನು ಅಂತಹಾ ಪ್ರತಿಯಂದು ಸಮೂಹಕ್ಕೂ ಒದಗಿಸುವ ಮೂಈಲಕ ನಷ್ಟವನ್ನು ಭರ್ತಿಮಾಡತಕ್ಕದ್ದು.

9. ಮೇಲಿನ ಕಂಡಿಕೆ 8ರಲ್ಲಿ ಹೇಲಲಾದಂತೆ ಅಭ್ಯಥಿಘಳ ಕೊರತೆಯಿಂದಾಗಿ ಮೀಸಲಾತಿ ವರ್ಗಗಳ ರಿಕ್ತ ಸ್ಥಾನಗಳನ್ನು ಭರ್ತಿಮಾಡಲಾಗದೆಯೇ ಉಳಿದು ಹೋದ ಮತ್ತ ನಂತರದ ಆಯ್ಕೆಗಳಲ್ಲಿ ನಷ್ಟವನ್ನು ಭರ್ತಿ ಮಾಡಲು ಕೊಂಡೊಯ್ಯುವ ಪ್ರಕ್ರಿಯೆಯನ್ನು ಮೊದಲನೇ ಕ್ಯಾಲೆಂಡರ್ ವರ್ಷದ ಆಯ್ಕೆಗಳಲ್ಲಿ ಮತ್ತು ನಂತರದ ಎರಡು ಕ್ಯಾಲೆಂಡರ್ ವರ್ಷಗಳ ಆಯ್ಕೆಗಳಲ್ಲಿ ಮಾತ್ರ ಮುಂದುವರಿಸತಕ್ಕದ್ದು . ಮೂರನೇ ಕ್ಯಾಲೆಂಡರ್ ವರ್ಷದ ಅಂತ್ಯದಲ್ಲಿ ಯಾವುದೇ ಮೀಸಲಾತಿ ರಿಕ್ತ ಸ್ಥಾನವು ಹೊಂದಾಣಿಕೆಯಾಗದೆಯೇ ಉಳಿದುಕೊಂಡರೆ, ಅವು ವರ್ಗೀಕರಣವನ್ನು ಕಳೆದುಕೊಳ್ಳುತ್ತದೆ ಮತ್ತು ಮುಂದಿನ (ನಾಲ್ಕನೆಯ) ಕ್ಯಾಲೆಂಡರ್ ವರ್ಷದಲ್ಲಿ ಅವುಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸಿ ರೋಸ್ಟರನ್ನು ಮುಂದುವರಿಸತಕ್ಕದ್ದು.

PRINCIPAL
RURAL COLLEGE
KANAKAPURA-562 117
Ramanagara District

10. ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದ ಭರ್ತಿಯಾಗದೆಯೇ ಉಳಿದ ರಿಕ್ತ ಸ್ಥಾನಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸತಕ್ಕದ್ದು.

11. ಮೀಸಲಾತಿ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಮತ್ತು ಪರಿಶೀಲಿಸುವಲ್ಲಿ ಸರ್ಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚನೆಗಳನ್ನು ಅನುಸರಿಸತಕ್ಕದ್ದು.

12.ಸಂಬಂಧಿಸಿದ ಸರ್ಕಾರದ ಕಾರ್ಯದಶಿಗಳು:

(1) ಸ್ಥಳೀಯ ಸಂಸ್ಥೆಗಳು:

(11) ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣಕ್ಕೊಳಪಡುವ ಹಾಗೂ ಕಂಪೆನಿ ಅಧಿನಿಯಮ, ಇತರೆ ಅಧಿನಿಯಮಮ ನಿಯಮ ಇತ್ಯಾದಿಗಳಡಿ ಸ್ಥಾಪಸಲಾದ ಕಂಪೆನಿ, ಕಾರ್ಪೊರೇಷನ್, ಬೋರ್ಡ್, ನಿಗಮ ಇತ್ಯಾದಿ.

(111) ಅಲ್ಪ ಸಂಖ್ಯಾತರ ಸಂಸ್ಥೆಗಳನ್ನು ಹೊರತುಪಡಿಸಿ ಸರ್ಕಾರದಿಂದ ಅನುದಾನ ಅಥವಾ ಸಹಾಯ ಪಡೆಯುವ ಸಂಸ್ಥೆಗಳು (ಇಲ್ಲಿ ಅನುದಾನ ಅಥವಾ 'ಸಹಾಯ' ಎಂದರೆ ಸರ್ಕಾರ ನೀಡುವ ಆರ್ಥಿಕ ಮತ್ತು ಅಥವಾ ಇತರ ನೆರವು ಒಳಗೊಳ್ಳುವುದು).

ಇವುಗಳಿಗೆ ಅನ್ವಯವಾಗುವ ಸಮಬಂದಿಸಿದ ಕಾನೂನುಗಳಡಿಯಲ್ಲಿ ಸೂಕ್ತ ಸೂಚನೆ ಆದೇಶಗಳನ್ನು ಹೊಡಿಸತಕ್ಕದ್ದು.

13. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಆದರೆ, ಯಾವುದೇ ವೃಂದದ ಹುದ್ದೆಗಳ ಸಂಬಂಧದಲ್ಲಿ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಂಡಿದ್ದು ಈ ಆದೇಶ ಹೊರಡಿಸುವ ವೇಳೆಗೆ ಬಾಕಿಯಿದ್ದಲ್ಲಿ. ಆ ನೇರ ನೇಮಕಾತಿ ಪ್ರಕ್ರಯೆಯನ್ನು ಸಮಾಜ ಕಲ್ಯಾಣ ಇಲಾಖೆ ಪ್ರತ್ಯೇಕವಾಗಿ ಹೊರಡಿಸುವ ಆದೇಶದನ್ವಯ ಪೂರ್ಣಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಕೆ.ನಾಯಕ್
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

PRINCIPAL
RURAL COLLEGE
KANAKAPURA-562 117
Ramanagara District

## ಅನುಬಂಧ –1

### ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08 ಸಹಿಮ 95 ದಿನಾಂಕ 20ನೇ ಜೂನ್ 1995

| | | | |
|---|---|---|---|
| (1) ಪ. ಜಾ. | (26) ಸಾ. ಅ | (51) 2 (ಎ) | (76) ಸಾ. ಅ |
| (2) ಸಾ. ಅ | (27) ಪ. ಜಾ. | (52) ಸಾ. ಅ | (77) 2 (ಎ) |
| (3) ಪ. ಪಂ | (28) ಸಾ. ಅ | (53) ಪ. ಜಾ. | (78) ಸಾ. ಅ |
| (4) ಸಾ. ಅ | (29) 2 (ಎ) | (54) ಸಾ. ಅ | (79) 1 |
| (5) 1 | (30) ಸಾ. ಅ | (55) 2 (ಎ) | (80) ಸಾ. ಅ |
| (6) ಸಾ. ಅ | (31) 1 | (56) ಸಾ. ಅ | (81) ಪ. ಜಾ. |
| (7) 2 (ಎ) | (32) ಸಾ. ಅ | (57) 1 | (82) ಸಾ. ಅ |
| (8) ಸಾ. ಅ | (33) ಪ. ಜಾ. | (58) ಸಾ. ಅ | (83) 3 (ಬಿ) |
| (9) ಪ. ಜಾ. | (34) ಸಾ. ಅ | (59) ಪ. ಜಾ. | (84) ಸಾ. ಅ |
| (10) ಸಾ. ಅ | (35) 2 (ಬಿ) | (60) ಸಾ. ಅ | (85) 2(ಬಿ) |
| (11) 2 (ಬಿ) | (36) ಸಾ. ಅ | (61) 2 (ಬಿ) | (86) ಸಾ.ಅ |
| (12)ಸಾ.ಅ | (37) 2 (ಎ) | (62) ಸಾ.ಅ | (87) 2 (ಬಿ) |
| (13)2 (ಎ) | (38) ಸಾ.ಅ | (63) 2 (ಎ) | (88) ಸಾ. ಅ |
| (14)ಸಾ.ಅ | (39) ಪ .ಪಂ | (64) ಸಾ.ಅ | (89) ಸಾ.ಅ |
| (15)ಪ. ಜಾ | (40) ಸಾ.ಅ | (65) 3 (ಬಿ) | (90) ಸಾ.ಅ |
| (16)ಸಾ.ಅ | (41) ಪ. ಜಾ | (66) ಸಾ.ಅ | (91) 2 (ಎ) |
| (17)3 (ಬಿ) | (42) ಸಾ .ಅ | (67) ಪ. ಜಾ | (92) ಸಾ. ಅ |
| (18)ಸಾ.ಅ | (43) 3 (ಬಿ) | (68) ಸಾ. ಅ | (93) ಪ. ಜಾ |
| (19)3 (ಬಿ) | (44) ಸಾ. ಅ | (69) 2 (ಎ) | (94) ಸಾ. ಅ |
| (20) ಸಾ.ಅ | (45) 2 (ಎ) | (70) ಸಾ.ಅ | (95) 3 (ಎ) |
| (21) 2 (ಬಿ) | (46) ಸಾ. ಅ | (71) ಪ. ಪಂ | (96) ಸಾ. ಅ |
| (22) ಸಾ. ಅ | (47) 3 (ಎ) | (72) ಸಾ. ಅ | (97) 2 (ಎ) |
| (23) ಪ. ಜಾ. | (48) ಸಾ. ಅ | (73) 3 (ಎ) | (98) ಸಾ. ಅ |
| (24) ಸಾ. ಅ | (49) ಪ. ಜಾ. | (74) ಸಾ. ಅ | (99) 3 (ಬಿ) |
| (25) 2 (ಎ) | (50) ಸಾ. ಅ | (75) ಪ. ಜಾ. | (100) ಸಾ. ಅ |

### ಸ್ಪಷ್ಟೀಕರಣ

| | | | | |
|---|---|---|---|---|
| 1 | – ಪ್ರವರ್ಗ – | 1 | ಶೇಕಡ | 4 |
| 2 (ಎ) | – ಪ್ರವರ್ಗ – | 2 (ಎ) | " | 15 |
| 2 (ಬಿ) | – ಪ್ರವರ್ಗ – | 2 (ಬಿ) | " | 4 |
| 3 (ಎ) | – ಪ್ರವರ್ಗ – | 3 (ಎ) | " | 4 |
| 3 (ಬಿ) | – ಪ್ರವರ್ಗ – | 3 (ಬಿ) | " | 5 |
| ಪ. ಜಾ. | – ಪರಿಶಿಷ್ಟ ಜಾತಿ – | | " | 15 |
| ಪ.ಪಂ | – ಪರಿಶಿಷ್ಟ ಪಂಗಡ | | " | 3 |
| ಸಾ.ಅ | – ಸಾಮಾನ್ಯ ಅರ್ಹತೆ | | " | 50 |

PRINCIPAL
RURAL COLLEGE
KANAKAPURA-562 117
Ramanagara District.